**SC No. 205/2022**
**PW-5**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **205/22**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮುಕ್ತುಮ ಹುಸೇನ ಸಾವಕಾರ | ಪ್ರಾಸಾ: 5 |
| ತಂದೆಯ ಹೆಸರು | : | ಮದರಸಾಬ್ ಸಾವಕಾರ | ಚಾಸಾ: 13 |
| ಪ್ರಾಯ | : | 52 ವರ್ಷ | ದಿ: 15.03.2025 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಬುರಣಕಿ, ತಾ: ಖಾನಾಪೂರ, ಜಿ: ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ-1 ಇಸ್ಮಾಯಿಲ್ ಬೀಡಿ ಗೊತ್ತು. ಚಾಸಾ-10 ಶ್ರೀಮತಿ ಹಸೀನಾ ಬೀಡಿ ಚಾಸಾ-1 ರವರ ಹೆಂಡತಿ. ಚಾಸಾ-1 ಮತ್ತು ಚಾಸಾ-10 ರವರಿಗೆ ಒಟ್ಟು ಮೂರು ಜನ ಮಕ್ಕಳು. ಎರಡು ಹೆಣ್ಣುಮಕ್ಕಳು ಮತ್ತು ಒಂದು ಗಂಡು ಮಗ. ಚಾಸಾ-1 ಮತ್ತು ಚಾಸಾ-10 ರವರ ಇಬ್ಬರೂ ಹೆಣ್ಣುಮಕ್ಕಳು ಶಬಾನಾ ಮತ್ತು ಅರಿಫಾ. ಅವರ ಗಂಡುಮಗ ಶುಬಾನಿ (ಪ್ರಾಸಾ-4).

2. ಶಬಾನಾಳನ್ನು 2012 ರಲ್ಲಿ ಮುನವಳ್ಳಿಯ ಮೆಹಬೂಬಸಾಬ್ ಗೋರನಕೊಳ್ಳ ಇವನಿಗೆ ಮದುವೆ ಮಾಡಿ ಕೊಡಲಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರು ಪಡಿಸಿರುವ ಆರೋಪಿ ಸದರಿ ಮೆಹಬೂಬ್ ಆಗಿರುತ್ತಾನೆ. ಆರೋಪಿ ಮತ್ತು ಶಬಾನಾಳಿಗೆ ಎರಡು ಜನ ಮಕ್ಕಳು. ಒಂದು ಗಂಡು ಮತ್ತು ಒಂದು ಹೆಣ್ಣು ಮಗಳು. ಅವರೇಂದರೆ ಸುಫಿಯಾ ಮತ್ತು ಆಲಿಯಾ (ಪ್ರಾಸಾ-2). ಮದುವೆಯಾದ ನಂತರ ಆರೋಪಿಯು ಶಬಾನಾಳಿಗೆ ಅನೈತಿಕ ಸಂಬಂಧ ಇದೆ ಎಂದು ಆಕೆಯ ಮೇಲೆ ಸಂಶಯ ಪಡುತ್ತಿದ್ದರು. ಆ ಬಗ್ಗೆ ಒಂದು ಸಲ ಅಂದರೆ ಈ ಕೇಸಿನ ಘಟನೆಯಾಗುವ ಸುಮಾರು ಒಂದು ವರ್ಷದ ಹಿಂದೆ ಹಿರಿಯರನ್ನು ಸೇರಿಸಿ ಪಂಚಾಯತಿ ಮಾಡಲಾಗಿತ್ತು. ಸದರಿ ಪಂಚಾಯತಿಯಲ್ಲಿ ನನ್ನನ್ನು ಚಾಸಾ-1 ಮತ್ತು ಪ್ರಾಸಾ-4 ನೇಯವರು ಕರೆದುಕೊಂಡು ಹೋಗಿದ್ದರು. ಸದರಿ ಪಂಚನಾಯತಿಕೆಯಲ್ಲಿ ಚಾಸಾ-12 ಮಹಮದ ಇಟಗಿ ಸಹ ಭಾಗವಹಿಸಿದ್ದರು. ಸದರಿ ಪಂಚಾಯತಿಯು ಮುನವಳ್ಳಿಯಲ್ಲಿ ಆರೋಪಿಯ ಮನೆಯಲ್ಲಿ ನಡೆದಿದ್ದು, ಆಗ ಜಮಾತಿಯವರು ಸೇರಿ ಆರೋಪಿಗೆ ಬುದ್ದಿವಾದ ಹೇಳಿದ್ದರು. ಶಬಾನಾಳ ಜೊತೆ ಪದೆ ಪದೆ ಗಲಾಟೆ ಮಾಡಬೇಡ, ಹಿಂಸೆ ಕೊಡಬೇಡ ಎಂದು ನಾವು ಆರೋಪಿಗೆ ಹೇಳಿರುತ್ತೇವೆ.

3. ನಂತರ ದಿನಾಂಕ 18.08.2022 ರಂದು ನಾನು ಊರಲ್ಲಿದ್ದಾಗ ಮುಂಜಾನೆ ಸುಮಾರು 11.00 ಗಂಟೆ ಸಮಯದಲ್ಲಿ ಚಾಸಾ-1 ಮತ್ತು ಪ್ರಾಸಾ-4 ನೇಯವರು ನನ್ನ ಮನೆಗೆ ಬಂದು ನನ್ನಲ್ಲಿ, ಆರೋಪಿಯು ಶಬಾನಾಳನ್ನು ಚಾಕುವಿನಿಂದ ಇರಿದು ಕೊಂದಿದ್ದಾನೆ ಎಂದು ಹೇಳಿರುತ್ತಾರೆ. ನಂತರ ನಮ್ಮ ಜಮಾತಿಯವರಾದ ಚಾಸಾ-14 ಶುಬಾನಿ ದೇಶನೂರ, ಚಾಸಾ-15 ದಾದಾಪೀರ ಹುದಲಿ, ಚಾಸಾ-12

ಮಹಮ್ಮದಶಮೀರ ಇಟಗಿ, ಪ್ರಾಸಾ-1 ಮಹೇಶ ಪಾಟೀಲ, ನಾನು, ಶಬಾನಾಳ ತಂದೆ - ತಾಯಿ ಮತ್ತು ತಮ್ಮ ಹಾಗೂ ಇನ್ನು ನಾಲ್ಕು ಜನ ಸವದತ್ತಿಯಲ್ಲಿ ಅಯ್ಯಪ್ಪ ನಗರದಲ್ಲಿರುವ ಶಬಾನಾ ವಾಸ ಮಾಡುತ್ತಿದ್ದ ಬಾಡಿಗೆ ಮನೆಗೆ ಹೋಗಿರುತ್ತೇವೆ. ಆಗ ಸಮಯ ಅಪರಾಹ್ನ ಸುಮಾರು 01.30 ಗಂಟೆಯಾಗಿತ್ತು.

4. ಅಲ್ಲಿ ಮನೆಗೆ ಹೋದಾಗ ಮನೆಯ ಬಾಗಿಲು ತೆರೆದಿತ್ತು. ಶಬಾನಾ ರಕ್ತದ ಮಡುವಿನಲ್ಲಿ ಬಿದ್ದಿದ್ದಳು. ಅಲ್ಲಿ ಶಬಾನಾಳ ಮಗಳು ಪ್ರಾಸಾ-2 ಆಲಿಯಾ ಇದ್ದಳು. ಶಬಾನಾಳ ದೇಹ ನೋಡಿದಾಗ ಆಕೆಯ ಕುತ್ತಿಗೆ, ಮುಂಗೈ ಮತ್ತು ಹೊಟ್ಟೆಯ ಮೇಲೆ ಚಾಕುವಿನಿಂದ ಚುಚ್ಚಿದ ಗಾಯ ಇತ್ತು. ನಾವು ಹೋಗಿ ನೋಡಿದಾಗ ಶಬಾನಾ ತೀರಿಕೊಂಡಿದ್ದಳು. ಪ್ರಾಸಾ-2 ನೇಯವಳು ಶವದ ಪಕ್ಕ ಕುಳಿತಿದ್ದಳು. ಅಲ್ಲಿ ಪಕ್ಕದ ಮನೆಯ ಪ್ರಾಸಾ-3 ಶಿವಾನಂದ ಚೊಪಡೆ ಇದ್ದರು. ಪ್ರಾಸಾ-3 ಮತ್ತು ಪ್ರಾಸಾ-2 ನೇಯವರಲ್ಲಿ ನಾವು ಘಟನೆಯ ಬಗ್ಗೆ ಕೇಳಿರುತ್ತೇವೆ. ಆಗ ಪ್ರಾಸಾ-2 ನೇಯವಳು ನಮ್ಮಲ್ಲಿ ತನ್ನ ತಂದೆಯು ತನ್ನ ತಾಯಿಯನ್ನು ಚಾಕುವಿನಿಂದ ಕೊಚ್ಚಿ ಕೊಚ್ಚಿ ಕೊಂದಿರುವುದಾಗಿ ಹೇಳಿರುತ್ತಾಳೆ.

5. ನಂತರ ಚಾಸಾ-1 ನೇಯವರು ನಮ್ಮನ್ನು ಪೋಲಿಸ ಠಾಣೆಗೆ ಹೋಗಿ ದೂರು ನೀಡೋಣ ಎಂದು ಪೋಲಿಸ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸ ಠಾಣೆಯಲ್ಲಿ ಚಾಸಾ-1 ನೇಯವರು ಹೇಳಿದಂತೆ ನಾನು ಫಿರ್ಯಾದಿಯನ್ನು ಬರೆದಿರುತ್ತೇನೆ. ಅದಕ್ಕೆ ಚಾಸಾ-1 ನೇಯವರು ಅವರ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಈಗ ತೋರಿಸಿದ ದಾಖಲೆಯು ಸದರಿ ಫಿರ್ಯಾದಿಯಾಗಿದ್ದು, ಅದು ನನ್ನ ಕೈಬರಹದಲ್ಲಿರುತ್ತದೆ. ಸದರಿ ಫಿರ್ಯಾದಿಯನ್ನು ನಿಪಿ-26 ಎಂದು ಗುರುತಿಸಲಾಯಿತು. ನಿಪಿ-26 ದಾಖಲೆಗೆ ನಾನು ದಸ್ತೂರ ಎಂದು ಸಹಿ ಮಾಡಿದ್ದು, ಸದರಿ ನನ್ನ ಸಹಿಯನ್ನು ನಿಪಿ-26(ಎ) ಎಂದು

ಗುರುತಿಸಲಾಯಿತು. ಸದರಿ ಪಿರ್ಯಾದಿಯನ್ನು ಪೋಲಿಸರಿಗೆ ಬರೆದು ಕೊಡುವಾಗ ಸಮಯ ಅಪರಾಹ್ನ 02.00 ರಿಂದ 02.15 ಗಂಟೆಯಾಗಿತ್ತು. ಮರುದಿನ ಪೋಲಿಸರು ಈ ಕೇಸಗೆ ಸಂಬಂಧಪಟ್ಟಂತೆ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ತೆಗೆದುಕೊಂಡಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎಸ್ ಕೆ ಪಿ ವಕೀಲರಿಂದ (ಡಿ ಎಲ್ ಎಸ್ ಎ ಪರವಾಗಿ)

6. ಚಾಸಾ-1 ನೇಯವನ ಮನೆ ನನ್ನ ಮನೆಯಿಂದ ಸುಮಾರು 200 ಮೀಟರ ದೂರದಲ್ಲಿದೆ. ಚಾಸಾ-1 ನೇಯವನು ನನಗೆ ಸಂಬಂಧಿಕ ಅಲ್ಲ. ಅವರು ನಮ್ಮ ಊರಿನವರಾದ ಕಾರಣ ಅವರ ಪರಿಚಯ ನನಗೆ ಮೊದಲಿನಿಂದಲೂ ಇದೆ. ಈ ಕೇಸನ ಘಟನೆಗಿಂತ ಸುಮಾರು ಒಂದು ವರ್ಷದ ಹಿಂದೆ ಶಬಾನಾ ಮತ್ತು ಆರೋಪಿಯ ಸಮಸ್ಯೆಯ ಬಗ್ಗೆ ಚಾಸಾ-1 ನೇಯವರು ಒಂದೆರಡು ಸಲ ನನ್ನಲ್ಲಿ ವಿಷಯ ತಿಳಿಸಿರುತ್ತಾರೆ. ಅದಕ್ಕಿಂತ ಹಿಂದೆ ಯವತ್ತು ಚಾಸಾ-1 ನೇಯವರು ಶಬಾನಾ ಮತ್ತು ಆರೋಪಿಯ ಸಮಸ್ಯೆಯ ಬಗ್ಗೆ ವಿಷಯವನ್ನು ತಿಳಿಸಿಲ್ಲ. ಶಬಾನಾಳ ಮದುವೆಗೆ ನಾನು ಹೋಗಿದ್ದೆ. ಆದರೆ ಸದರಿ ಮದುವೆಯಲ್ಲಿ ನಾನು ಹಿರಿತನ ಮಾಡಿಲ್ಲ.

7. ಈ ಕೇಸನ ಘಟನೆಗಿಂತ ಒಂದು ವರ್ಷದ ಹಿಂದೆ ಮುನವಳ್ಳಿಯ ಆರೋಪಿಯ ಮನೆಗೆ ಹೋದಾಗ ಅಲ್ಲಿ ಶಬಾನಾ ಮತ್ತು ಆಕೆಯ ಮಕ್ಕಳು ಇದ್ದರು. ಆರೋಪಿಯ ತಾಯಿ ಸಹ ಇದ್ದಳು. ಆ ಸಂದರ್ಭದಲ್ಲಿ ಮುನವಳ್ಳಿಯ ಹಿರಿಯರನ್ನು ಚಾಸಾ-1 ನೇಯವನು ಕರೆದಿರುತ್ತಾನೆ. ಆರೋಪಿಯು ಸದರಿ ಹಿರಿಯರನ್ನು ಕರೆದ ಬಗ್ಗೆ ನನಗೆ ಗೊತ್ತಿಲ್ಲ. ಶಬಾನಾಳಿಗೆ ನಡತೆ ಸರಿ ಇದ್ದಿಲ್ಲ ಮತ್ತು ಆಕೆಗೆ ಅಕ್ರಮ ಸಂಬಂಧ ಇತ್ತು ಎನ್ನುವ ಬಗ್ಗೆ ಶಬಾನಾಳಿಗೆ ಬುದ್ದಿ ಹೇಳಲು ನಮ್ಮನ್ನು ಆರೋಪಿಯ ಊರಿಗೆ ಕರೆಸಿದ್ದು ಎಂದರೆ

ಸರಿಯಲ್ಲ. ಸದರಿ ಪಂಚಾಯಿತಿಕೆಯಲ್ಲಿ ಶಬಾನಾ ಮತ್ತು ಆರೋಪಿ ಇಬ್ಬರಿಗೂ ಬುದ್ಧಿ ಹೇಳಿರುತ್ತೇವೆ. ಆದರೆ ಶಬಾನಾಳಿಗೆ ಅಕ್ರಮ ಸಂಬಂಧ ಇದೆ ಎನ್ನುವ ಬಗ್ಗೆ ಆಕೆಗೆ ನಾವು ಬುದ್ಧಿಯನ್ನು ಹೇಳಿಲ್ಲ.

8. ಆರೋಪಿಯು ಕೂಲಿಕೆಲಸ ಮಾಡುತ್ತಿದ್ದ ಎಂಬುದು ನನಗೆ ಗೊತ್ತು. ಆರೋಪಿಯು ಸವದತ್ತಿಯ ಐಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದ ಎಂಬುದು ನನಗೆ ಗೊತ್ತಿಲ್ಲ. ಶಬಾನಾಳಿಗೆ ಅಕ್ರಮ ಸಂಬಂಧ ಇತ್ತು ಎನ್ನುವ ಬಗ್ಗೆ ಆಕೆಗೆ ನಾವು ಬುದ್ಧಿ ಹೇಳಿ ಸವದತ್ತಿಯಲ್ಲಿ ಮನೆ ಮಾಡುವಂತೆ ಹೇಳಿದ ಮೇರೆಗೆ ಆರೋಪಿಯು ಸವದತ್ತಿಯಲ್ಲಿ ಮನೆ ಮಾಡಿದ್ದು ಎಂದರೆ ಸರಿಯಲ್ಲ. ನಂತರ ಆರೋಪಿಯು ಶಬಾನಾಳನ್ನು ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಜೀವನ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಶಬಾನಾಳನ್ನು ಆರೋಪಿಯು ಹೊರಗೆ ಕೆಲಸಕ್ಕೆ ಕಳುಹಿಸುತ್ತಿರಲಿಲ್ಲ ಮತ್ತು ಆರೋಪಿಯು ದುಡಿದು ಸಂಪಾದಿಸಿ ಜೀವನ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಸ್ವಲ್ಪ ತಿಂಗಳಗಳ ನಂತರ ಆರೋಪಿಗೆ ಹರ್ನಿಯಾ ಶಸ್ತ್ರ ಚಿಕಿತ್ಸೆ ಆಗಿತ್ತು ಎಂಬುದು ನನಗೆ ಗೊತ್ತಿಲ್ಲ. ಆರೋಪಿಗೆ ಹರ್ನಿಯಾ ಶಸ್ತ್ರ ಚಿಕಿತ್ಸೆ ಆಗಿತ್ತು ಎನ್ನುವ ವಿಷಯವನ್ನು ಚಾಸಾ-1 ರವರು ನನ್ನಲ್ಲಿ ಹೇಳಿಲ್ಲ.

9. ಆರೋಪಿಗೆ ಹರ್ನಿಯಾ ಶಸ್ತ್ರ ಚಿಕಿತ್ಸೆ ಆದ ಸಂದರ್ಭದಲ್ಲಿ ಆತ ಮೂರು ತಿಂಗಳಗಳ ಕಾಲ ಮನೆಯಲ್ಲಿಯೇ ಇದ್ದ ಮತ್ತು ಆಗ ಶಬಾನಾ ಚಾಸಾ-20 ರವರಿಗೆ ಸೇರಿದ ಐಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ನಂತರ ಕರೋನಾ ಸಮಯದಲ್ಲಿ ಲಾಕ್ ಡೌನ್ ಇದ್ದ ಕಾರಣ ಜೀವನ ನಡೆಸುವ ಸಲುವಾಗಿ ಶಬಾನಾ ಐಸ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಶಬಾನಾಳು ಬೇರೆಯವರ ಮನೆಗೆ ಹೋಗುತ್ತಿದ್ದಳು ಮತ್ತು ಆಕೆಯ ಚಾಳಿಯನ್ನು ಆಕೆ ಬಿಟ್ಟಿಲ್ಲ ಎನ್ನುವ ವಿಷಯ ನನಗೆ

ಗೊತ್ತಿಲ್ಲ. ಸದರಿ ವಿಷಯವನ್ನು ಚಾಸಾ-1 ರವರು ನನಗೆ ಹೇಳಿಲ್ಲ. ಆರೋಪಿ ಮತ್ತು ಶಬಾನಾಳ ಮಧ್ಯೆ ವಿವಾಹ ವಿಚ್ಛೇದನ ಆಗಿತ್ತು ಎನ್ನುವ ವಿಷಯ ನನಗೆ ಗೊತ್ತಿಲ್ಲ. ಸದರಿ ವಿವಾಹ ವಿಚ್ಛೇದನದ ಒಪ್ಪಂದದ ಪ್ರಕಾರ ಶಬಾನಾಳ ಮಗಳು ಶಬಾನಾಳ ಜೊತೆ ಮತ್ತು ಮಗ ಆರೋಪಿಯ ಜೊತೆ ಮಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

10. ಸವದತ್ತಿಯ ಐಯ್ಯಪ್ಪ ನಗರದಲ್ಲಿ ಶಬಾನಾ ವಾಸ ಮಾಡುತ್ತಿದ್ದ ಬಾಡಿಗೆ ಮನೆಯಲ್ಲಿ ಈ ಕೇಸಿನ ಘಟನೆಗಿಂತ ಹಿಂದೆ ನಾನು ಯಾವತ್ತು ಹೋಗಿಲ್ಲ. ಸದರಿ ಮನೆಯ ಅಕ್ಕಪಕ್ಕದಲ್ಲಿ ಯಾರು ವಾಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯೊಳಗೆ ನಾನು ಘಟನೆಯ ಸಂದರ್ಭದಲ್ಲಿ ಹೋಗಿಲ್ಲ. ನಾವು ಸದರಿ ಮನೆಗೆ ಹೋದ ಸಂದರ್ಭದಲ್ಲಿ ಪ್ರಾಸಾ-2 ನೇಯವಳನ್ನು ಚಾಸಾ-1 ನೇಯವರು ಮಾತನಾಡಿಸಿರುತ್ತಾರೆ. ನಾನು ಸಹ ಪ್ರಾಸಾ-2 ಆಲಿಯಾಳನ್ನು ಮಾತನಾಡಿಸಿರುತ್ತೇನೆ. ನಂತರ ಪೋಲಿಸ ಠಾಣೆಗೆ ಹೋದಾಗ ಸಮಯ ಅಪರಾಹ್ನ 02.15 ಆಗಿತ್ತು. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು ಚಾಸಾ-12 ನೇಯವರು ಹೋಗಿರುತ್ತೇವೆ. ಪೋಲಿಸ ಠಾಣೆಯೊಳಗೆ ಚಾಸಾ-1 ರವರ ಜೊತೆಗೆ ನಾನು ಮತ್ತು ಚಾಸಾ-12 ರವರು ಸಹ ಹೋಗಿರುತ್ತೇವೆ. ಚಾಸಾ-1 ನೇಯವರು ಶಾಲೆ ಕಲಿತಿಲ್ಲ. ನಾವು ಪೋಲಿಸ ಠಾಣೆಗೆ ಹೋದ ಸಮಯದಲ್ಲಿ ಅಲ್ಲಿ ಪೋಲಿಸರ ಇದ್ದರು, ಆದರೆ ಯಾವ ಹುದೆದಯ ಪೋಲಿಸರು ಇದ್ದರು ಎಂದು ಗೊತ್ತಿಲ್ಲ. ಪಿರ್ಯಾದಿಯನ್ನು ನಾನು ಪೋಲಿಸ ಠಾಣೆಯಲ್ಲಿ ಬರೆದಿರುತ್ತೇನೆ. ಪಿರ್ಯಾದಿಯ ಹಾಳೆಯನ್ನು ನಾನೇ ಕೊಂಡು ತೆಗೆದುಕೊಂಡು ಹೋಗಿದ್ದೆ. ನಾನು ಪಿರ್ಯಾದಿಯನ್ನು ಬರೆಯುವಾಗ ಪೋಲಿಸರು ಇದ್ದಿಲ್ಲ. ಪೋಲಿಸರಿಗೆ ಶಬಾನಾಳ ಕೊಲೆಯಾಗಿದೆ ಎನ್ನುವ ವಿಷಯ ಹೇಳಿದ ನಂತರ ಪಿರ್ಯಾದಿಯನ್ನು ಬರೆಯಲಾಗಿದೆ ಆದರೆ ಪಿರ್ಯಾದಿಯನ್ನು ಬರೆಯುವ ಮೊದಲು ಪೋಲಿಸರ ಜೊತೆ ಚರ್ಚೆಯಾಗಿಲ್ಲ. ಪೋಲಿಸರು ಹೇಳಿದಂತೆ ನಾನು ಪಿರ್ಯಾದಿಯನ್ನು

ಬರೆದಿದ್ದು ಎಂದರೆ ಸರಿಯಲ್ಲ. ಪೋಲಿಸರು ಹೇಳಿದಂತೆ ನಾನು ಪಿರ್ಯಾದಿಯನ್ನು ಬರೆದುಕೊಂಡಿದ್ದು ಮತ್ತು ಅದಕ್ಕೆ ಚಾಸಾ-1 ರವರ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಂಡಿದ್ದು ಎಂದರೆ ಸರಿಯಲ್ಲ. ಪೋಲಿಸರು ಹೇಳಿದ ಮೇರೆಗೆ ನಾನು ಪಿರ್ಯಾದಿಗೆ ನನ್ನ ಸಹಿ ಮಾಡಿದ್ದು ಎಂದರೆ ಸರಿಯಲ್ಲ.

11. ತನ್ನ ತಾಯಿಯನ್ನು ತನ್ನ ತಂದೆ ಚಾಕುವಿನಿಂದ ಕೊಚ್ಚಿ ಕೊಚ್ಚಿ ಕೊಲೆ ಮಾಡಿರುತ್ತಾರೆ ಎಂದು ಪ್ರಾಸಾ-2 ಆಲಿಯಾ ನಮ್ಮಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಶಬಾನಾ ತೀರಿಕೊಂಡ ವಿಷಯ ನನಗೆ ಬೆಳಿಗ್ಗೆ ಗೊತ್ತಾಗಿರುತ್ತದೆ ಮತ್ತು ನಾನು ಬೆಳಗಿನ ಸಮಯದಲ್ಲಿ ನಾನು ಶಬಾನಾಳ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಶಬಾನಾಳಿಗೆ ಬೇರೆ ಹುಡುಗರ ಜೊತೆ ಸಂಬಂಧ ಇತ್ತು ಮತ್ತು ಆಕೆಯ ಮೇಲೆ ಯಾರೋ ಹಲ್ಲೆ ಮಾಡಿ ಕೊಲೆ ಮಾಡಿದ್ದು ಎಂದರೆ ಸರಿಯಲ್ಲ. ಶಬಾನಾಳನ್ನು ಯಾರು ಕೊಲೆ ಮಾಡಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿಲ್ಲ ಮತ್ತು ಈ ಕಾರಣಕ್ಕೆ ಚಾಸಾ-1 ರವರ ಮಾತು ಕೇಳಿಕೊಂಡು ಆರೋಪಿ ಆಕೆಯನ್ನು ಕೊಲೆ ಮಾಡಿದ್ದು ಎಂದು ಈಗ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಬಾನಾಳನ್ನು ಕೊಲೆ ಮಾಡುವ ಯಾವುದೇ ಉದ್ದೇಶ ಆರೋಪಿಗೆ ಇದ್ದಿಲ್ಲ ಎಂದರೆ ಸರಿಯಲ್ಲ. ಚಾಸಾ-1, ಪ್ರಾಸಾ-4 ಮತ್ತು ಶಬಾನಾಳ ತಾಯಿಯ ಮಾತನ್ನು ಕೇಳಿರುಕೊಂಡು ನಾನು ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಬಾನಾಳ ನಡತೆ ಸರಿಯಿಲ್ಲ ಎಂಬ ಕಾರಣಕ್ಕೆ ಆಕೆಗೆ ಬುದ್ದಿವಾ ಹೇಳಲು ಮುನವಳ್ಳಿಯಲ್ಲಿ ನಾವು ಪಂಚಾಯಿತಿ ಕೂಡಿದ್ದೆವು ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.